ಶ್ರೀ ಅನಂತ್ ನಾಗ್ :- ಮಾನ್ಯ ಅಧ್ಯಕ್ಷರೆ, ಸೇತುವೆ ನಿರ್ಮಾಣ ಮತ್ತು ಸುರಂಗ ರಸ್ತೆಯ ನಿರ್ಮಾಣಕ್ಕೆ ಆದಷ್ಟು ಬೇಗ ಕ್ರಮಕೈಗೊಳ್ಳುತ್ತೇವೆಂದು ತಿಳಿಸುತ್ತೇನೆ.

ವಿಷಯ :- ಕೃಷ್ಣಾ ಭಾಗ್ಯ ಜಲ ನಿಗಮದಿಂದ ಸಂಗ್ರಹಿಸಲಾದ ಹಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 252 (390)

ಶ್ರೀ ಯು. ಬಿ. ಬಣಕಾರ್ (ಹಿರೇಕೆರೂರು) :- ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕೃಷ್ಣಾ ಭಾಗ್ಯ ಜಲ ನಿಗಮ ಖಾಸಗಿ ಹೂಡಿಕೆಯಿಂದ ಎಷ್ಟು ಹಣ ಸಂಗ್ರಹಿಸಲು ಗುರಿ ಹಾಕಿಕೊಳ್ಳಲಾಗಿತ್ತು; ಸಂಗ್ರಹಿಸಿದ ಮೊತ್ತವೆಷ್ಟು?

2) ಸಾರ್ವಜನಿಕ ಬಾಂಡ್‌ಗಳ ಮೂಲಕ ಎಷ್ಟು ಹಣ ಸಂಗ್ರಹಿಸಲು ಗುರಿ ಹಾಕಿಕೊಳ್ಳಲಾಗಿತ್ತು; ಸಂಗ್ರಹಿಸಿದ ಮೊತ್ತವೆಷ್ಟು?

ಶ್ರೀ ಕೆ. ಎನ್. ನಾಗೇಗೌಡ (ಭಾರೀ ಮತ್ತು ಮಧ್ಯಮ ನೀರಾವರಿ ಸಚಿವರು) :-

1) ಮೊದಲನೆಯ ಕಂತಿನಲ್ಲಿ ನಿಗಮವು ಖಾಸಗಿ ಬಾಂಡ್‌ಗಳಿಂದ ರೂ.150 ಕೋಟಿಗಳನ್ನು ಸಂಗ್ರಹಿಸಲು ಗುರಿ ಹಾಕಿಕೊಂಡಿದ್ದು, ರೂ.180 ಕೋಟಿಗಳನ್ನು ಸಂಗ್ರಹಿಸಿತು.

2) ಎರಡನೆಯ ಕಂತಿನಲ್ಲಿ ಸಾರ್ವಜನಿಕ ಬಾಂಡ್‌ಗಳ ಮೂಲಕ ರೂ.250 ಕೋಟಿಗಳನ್ನು ಸಂಗ್ರಹಿಸುವ ಗುರಿಹೊಂದಿದ್ದು, ರೂ. 3349-64 ರೂ. 349-64 ಕೋಟಿಗಳನ್ನು ಸಂಗ್ರಹಿಸಿತು. ನಬಿಯ ನಿಬಂಧನೆಗೆ ಅನುಸಾರವಾಗಿ ನಿಗಮವು ರೂ. 300 ಕೋಟಿಗಳನ್ನು ಉಳಿಸಿಕೊಂಡು ಉಳಿದ ರೂ. 49-64 ಕೋಟಿಗಳನ್ನು ಹೂಡಿಕೆದಾರರಿಗೆ ಹಿಂದಿರುಗಿಸಿದೆ.

ಶ್ರೀ ಯು. ಬಿ. ಬಣಕಾರ್ :- ಸನ್ಮಾನ್ಯ ಅಧ್ಯಕ್ಷರೇ, ಉತ್ತರ ಕರ್ನಾಟಕದ ಈ ಯೋಜನೆ ಆಗಿರುವಂತಹ ಈ ಕೃಷ್ಣ ಮೇಲ್ದಂಡೆ ಯೋಜನೆಗೆ, "ಕೃಷ್ಣಾ ಭಾಗ್ಯ ಜಲ ನಿಗಮದ" ಹೆಸರಿನಲ್ಲಿ ಸುಮಾರು 750 ಕೋಟಿ ರೂಪಾಯಿಗಳನ್ನು ಸಾರ್ವಜನಿಕ ಬಾಂಡ್‌ಗಳ ಮೂಲಕ ಸಂಗ್ರಹ ಮಾಡುವ ಗುರಿ ಹಾಕಿಕೊಂಡಿದ್ದಾರೆ. 349 ಕೋಟಿ ರೂಪಾಯಿ ಬಂದರೂ ಸಹ ಕೇವಲ 300 ಕೋಟಿ ರೂಪಾಯಿಗಳಲ್ಲಿ SEBI ಯವರ ಆದೇಶದ ಪ್ರಕಾರ 49 ಕೋಟಿ ರೂಪಾಯಿಗಳನ್ನು ವಾಪಸ್ ಮಾಡಿದ್ದಾರೆ, ಕಾರಣ ಏನು ಹಾಗೂ ಈ ಯೋಜನೆಯನ್ನು ಮುಗಿಸುವುದಕ್ಕೋಸ್ಕರ ಸರ್ಕಾರ ಏನು ಕಾರ್ಯಕ್ರಮ ಹಾಕಿಕೊಂಡಿದೆ?

ಶ್ರೀ ಕೆ. ಎನ್. ನಾಗೇಗೌಡ :- ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸ್ನೇಹಿತರು ಹೇಳಿದ ಪ್ರಕಾರ ನಾವು ಇಲ್ಲಿಯವರೆಗೆ 25 ಜೂನ್ 1994 ಕ್ಕೆ

222.60 ಕೋಟಿ ರೂ. ಗಳನ್ನು ಖರ್ಚು ಮಾಡಿದ್ದೇವೆ. ಒಟ್ಟು 450 ಕೋಟಿಗಳಲ್ಲಿ ಹೋದ ವರ್ಷ 150 ಕೋಟಿ ನಮ್ಮ ಗುರಿ ಇತ್ತು, ಅದಕ್ಕೆ 20 ಪರ್ಸೆಂಟ್ ಎಕ್ಸ್‌ಟ್ರಾ. 180 ಕೋಟಿ ಕಲೆಕ್ಟ್ ಮಾಡಿದ್ದೇವೆ. ಈ ವರ್ಷ ತಾವು ಹೇಳಿದ ಹಾಗೆ 250 ಇತ್ತು, 30 ಪರ್ಸೆಂಟ್ ನಾವು ಖರ್ಚು ಮಾಡಿಕೊಂಡಿದ್ದೇವೆ. ನಾವು ರಿಟರ್ನ್ ಮಾಡಲಿಕ್ಕೆ ನಮ್ಮ ಮ್ಯಾಕ್ಸಿಮಮ್ ಲಿಮಿಟ್ ಇದ್ದುದು 250 ಕೋಟಿ ರೂ.ಗಳು ಪ್ಲಸ್ 30 ಪರ್ಸೆಂಟ್ ಎಕ್ಸ್‌ಟ್ರಾ ಇದು ಫರ್ಸ್ಟ್ ಇನ್‌ಸ್ಟಾಲ್‌ಮೆಂಟ್. ಇಲ್ಲಿಯವರೆಗೆ ನಾವು 222 ಕೋಟಿಗಳಲ್ಲಿ 480 ಕೋಟಿ ರೂ. ಗಳನ್ನು ಖರ್ಚು ಮಾಡಿದ್ದೇವೆ. 2,000 ವರ್ಷಕ್ಕೆ ನಾವು ಈ ವರ್ಷ ಸಾವಿರ ಕೋಟಿ ಇಟ್ಟುಕೊಂಡು ಆ ಭಾಗದಲ್ಲಿ ಇರತಕ್ಕಂತಹ ಎಲ್ಲಾ ನೀರಾವರಿಗೆ ಖರ್ಚುಮಾಡುವುದಕ್ಕೆ ಫೈನಾನ್‌ಷಿಯಲ್ ಪೊಸಿಷನ್ ನೋಡಿಕೊಂಡು ಸ್ಟೇಜ್ ಬೈ ಸ್ಟೇಜ್ ಸ್ಟ್ರಂಥನ್ ಮಾಡಿಕೊಂಡು ಹೊರಟಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೆ; ಜನ ಏನೋ ತಮ್ಮ ಸರ್ಕಾರದ ಬಗ್ಗೆ ವಿಶ್ವಾಸ ಇಟ್ಟು ನೀರಾವರಿ ಯೋಜನೆಗೆ ಆದ್ಯತೆ ಕೊಟ್ಟು ತಮ್ಮ ಹಣವನ್ನು ಬಾಂಡ್‌ಗಳನ್ನು ಖರೀದಿಸುವುದರಲ್ಲಿ ತೊಡಗಿಸಿದ್ದಾರೆ. ಬಹುಶಃ ಸಾರ್ವಜನಿಕರು ಹಣ ತೊಡಗಿಸುವುದಕ್ಕೆ, ಬೇರೆ ಕಡೆಯಿಂದ ಸಾಲ ತರುವುದಕ್ಕೆ ಏನೂ ವ್ಯತ್ಯಾಸ ಇಲ್ಲ. ಮ್ಯಾಕ್ಸಿಮಮ್ ಇಂಟರೆಸ್ಟ್ ಮತ್ತು ಬೇರೆ ಬೇರೆ ಸವಲತ್ತುಗಳನ್ನು ತಾವು ಕೊಡುತ್ತೀರಿ. ಒಂದು ದಿವಸ ಜಾಸ್ತಿ ಇಟ್ಟುಕೊಂಡರೂ ನಿಮ್ಮ ಮೇಲೆ ಬರ್ಡನ್ ಜಾಸ್ತಿಯಾಗುತ್ತದೆ. ಸಾವಿರ ಕೋಟಿಯಲ್ಲಿ 300 ಕೋಟಿ ಖರ್ಚು ಮಾಡುತ್ತೀರಿ, ಉಳಿದುಹಣ 7,00 ಕೋಟಿ ಖರ್ಚು ಮಾಡುವುದಕ್ಕೆ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ಅದರ ಬಗ್ಗೆ ವಿವರಣೆ ಕೊಡಿ.

ಶ್ರೀ ಕೆ. ಎನ್. ನಾಗೇಗೌಡ :- 300 ಕೋಟಿ ರೂಪಾಯಿ ಈ ವರ್ಷದ ಫರ್ಸ್ಟ್ ಫೇಸ್ ಕಲೆಕ್ಷನ್. ಸೆಕೆಂಡ್ ಫೇಸ್ ಕಲೆಕ್ಷನ್‌ನಲ್ಲಿ ಉಳಿದ 300 ಕೋಟಿ ಕಲೆಕ್ಟ್ ಮಾಡುತ್ತೇವೆ. ಈಗ 200 ಕೋಟಿ ಬಡ್ಜೆಟ್ ಅಲೋಕೇಷನ್ ಇಟ್ಟಿದ್ದೇವೆ, ಇನ್ನು 200 ಕೋಟಿ ಸೆಪ್ಟಂಬರ್‌ನ ಬಡ್ಜೆಟರಿ ಅಲೋಕೇಷನ್‌ನಲ್ಲಿ ಇಡುತ್ತೇವೆ. 600 ಪ್ಲಸ್ 400 ಸಾವಿರ ಆಗಿದೆ. (ಮುನ್ನೂರು, ಮುನ್ನೂರು ಆರು ನೂರು ಆದರೆ 600 ಪ್ಲಸ್ 400) ಇದಕ್ಕೆ ನಾವು ಬಡ್ಜೆಟ್‌ನಲ್ಲಿ 65 ಕೋಟಿ ಇಟ್ಟಿದ್ದೇವೆ. ಯಾರ್ಯಾರು ಜನ ಹಣ ಹೂಡುತ್ತಾರೆ ಅವರಿಗೆ ಬಡ್ಡಿ ಕೊಡಬೇಕೆಂದು 65 ಕೋಟಿ ನಾವು ಬಡ್ಜೆಟ್‌ನಲ್ಲಿ ಅಲೋಕೇಷನ್ ಮಾಡಿಕೊಂಡು ಕೊಡುತ್ತಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಿದ ಮೂಲಭೂತವಾದ ಪ್ರಶ್ನೆ ಯಾವುದು, ಎಂದರೆ ಕೇಂದ್ರ ಸರ್ಕಾರ 900 ಕೋಟಿ ಇಟ್ಟಿದ್ದಾರೆ; ಅದರಲ್ಲಿ ಕೇಂದ್ರ ಸರ್ಕಾರದ ಹಣ ಎಷ್ಟು ಬರುತ್ತದೆ, ಯಾವ ರೀತಿ ಬರುತ್ತದೆ ಎಂದು ಅದು ಸಾಫ್ಟ್ ಲೋನ್, ಇರಬಹುದು ಲೋನ್ ಗ್ರ್ಯಾಂಟ್ ಅದರ ಕಂಡಿಷನ್ಸ್ ಗೈಡ್‌ಲೈನ್ಸ್ ನೋಡಿಕೊಂಡು ತದ ನಂತರ ಸಭೆಗೆ ತಿಳಿಸುತ್ತೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ :- 49 ಕೋಟಿ ರೂಪಾಯಿಯನ್ನು ಹೂಡಿಕೆದಾರರಿಗೆ ರಿಟರ್ನ್ ಮಾಡುತ್ತೇವೆಂದು ಹೇಳಿದ್ದಾರೆ, ತಾವು ಆ ಹಣ ಕೇಂದ್ರ ಸರ್ಕಾರದ ಒಪ್ಪಿಗೆ ಪಡೆದು ಡಿಸ್ಟ್ರಿಬ್ಯೂಟ್ ಮಾಡುತ್ತೀರೋ ಹೇಗೆ?

ಶ್ರೀ ಕೆ. ಎನ್. ನಾಗೇಗೌಡ :- ಮಾನ್ಯ ಅಧ್ಯಕ್ಷರೆ, ಮಾನ್ಯ ಚಿಮ್ಮನ ಕಟ್ಟಿಯವರು ಕೇಳಿದ ಪ್ರಶ್ನೆ ಬಹಳ ಪ್ರಮುಖವಾಗಿದೆ; ನಮಗೆ ಲಿಮಿಟ್ ಇದ್ದುದು 250ಕೋಟಿ ಅದನ್ನು ಇಷ್ಟೂ ಮಾಡಿದ್ದೇವೆ, ಅದಕ್ಕೆ 20 ಪರ್ಸೆಂಟ್ ಎಕ್ಸ್‌ಟ್ರಾ ಎಂದರೆ 300 ಕೋಟಿ ಆಯಿತು. ಆದ್ದರಿಂದ ನಾವು ರಿಸರ್ವ್ ಬ್ಯಾಂಕ್‌ನಲ್ಲಿ ಅದಕ್ಕೆ ಅವಕಾಶ ಕೊಡಿ ಎಂದು ಕೇಳಿದ್ದೇವೆ. ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ಅದಕ್ಕೆ ಪ್ರತಿ ದಿವಸ ಇಂಟರೆಸ್ಟ್ ಹೆಚ್ಚಾಗುತ್ತದೆ. ಇದು ಸ್ವಲ್ಪ ಆಲೋಚನೆ ಮಾಡಿ ಇನ್‌ಕ್ರೀಸ್ ಮಾಡುವುದಕ್ಕೆ ಪ್ರಯತ್ನ ಮಾಡೋಣ. ಹಣ ಬಂದರೆ ಆ ವರ್ಷದಲ್ಲಿ ಎಷ್ಟು ಖರ್ಚು ಮಾಡಬೇಕೆಂಬ ಬಗ್ಗೆ ಯೋಚನೆ ಮಾಡೋಣ.

ವಿಷಯ :- ಕನಕಪುರ ರಸ್ತೆಯಲ್ಲಿ ಬನಶಂಕರಮ್ಮ ದೇವಸ್ಥಾನದ ಬಳಿ ರಸ್ತೆಯನ್ನು ಅಗಲಗೊಳಿಸುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 253 (1560)

ಶ್ರೀ ಎಂ. ಶ್ರೀನಿವಾಸ್ (ಉತ್ತರಹಳ್ಳಿ) :- ಮಾನ್ಯ ಬೆಂಗಳೂರು ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕನಕಪುರ ರಸ್ತೆ-ಬನಶಂಕರಮ್ಮ ದೇವಾಲಯದ ಹತ್ತಿರ ರಸ್ತೆ ತುಂಬಾ ಕಿರಿದಾಗಿದ್ದು ವಾಹನ ಸಂಚಾರಕ್ಕೆ ತೊಂದರೆ ಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ರಸ್ತೆ ಬದಿಯಲ್ಲಿರುವ ಕ್ವಾರಿ ಹಳ್ಳವನ್ನು ಮುಚ್ಚಿಸಿ ರಸ್ತೆ ಅಗಲಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಅನಂತ್ ನಾಗ್ (ಬೆಂಗಳೂರು ಅಭಿವೃದ್ಧಿ ರಾಜ್ಯ ಸಚಿವರು) :-

ಅ) ಬಂದಿದೆ.

ಆ) ಬೆಂಗಳೂರು ಮಹಾನಗರ ಪಾಲಿಕೆಗೆ ರಸ್ತೆಯ ಅಗಲಗೊಳಿಸುವಿಕೆಯನ್ನು ಅವರ ಕಾರ್ಯಕ್ರಮ ಹಾಗೂ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಕ್ರಮ ಕೈಗೊಳ್ಳಲು ತಿಳಿಸಲಾಗುವುದು.

ಶ್ರೀ ಎಂ. ಶ್ರೀನಿವಾಸ್ :- ಸನ್ಮಾನ್ಯ ಸಭಾಧ್ಯಕ್ಷರೇ, ಕನಕಪುರ ರಸ್ತೆಯಲ್ಲಿ ಬನಶಂಕರಮ್ಮ ದೇವಸ್ಥಾನದ ಹತ್ತಿರ ದೊಡ್ಡ ಕ್ವಾರಿ ಹಳ್ಳ ಇದೆ. ಅದನ್ನು ಮುಚ್ಚಿಸಿ ರಸ್ತೆಯನ್ನು ಅಗಲ ಮಾಡಬೇಕೆಂದು ಕೇಳಿದ್ದೆ. ಅದಕ್ಕೆ ಬೆಂಗಳೂರು ಮಹಾನಗರ ಪಾಲಿಕೆಗೆ ರಸ್ತೆಯ ಅಗಲಗೊಳಿಸುವಿಕೆಯನ್ನು ಅವರ ಕಾರ್ಯಕ್ರಮ ಹಾಗೂ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ತಿಳಿಸುತ್ತೇವೆಂದು ಹೇಳಿದ್ದಾರೆ. ಆ ಕ್ವಾರಿ ಹಳ್ಳ ಸುಮಾರು 100-150 ಅಡಿ ಆಳ ಇದೆ ಆದ ಕಾರಣ ಅದನ್ನು ಆದಷ್ಟು ಬೇಗ ಈ ಕಾರ್ಯ ಆರ್ಜೆಂಟಾಗಿ ತೆಗೆದುಕೊಳ್ಳುತ್ತೀರೋ?